ಇವತ್ತಿನ ರೇಟು

ಸೆನ್ಸೆಕ್ಸ್	35543	-12
ನಿಫ್ಟಿ	10801	-4

₹ ಮೌಲ್ಯ	
$	68.07
€	80.63
£	91.73

ಆಭರಣ

ಚಿನ್ನ	
ಬೆಂಗಳೂರು, 10 ಗ್ರಾಂಗೆ	
ಶುದ್ಧ ಚಿನ್ನ	32,010
ಒಡವೆ ಚಿನ್ನ	30,130
ಮುಂಬೈ, 10 ಗ್ರಾಂಗೆ	
ಶುದ್ಧ ಚಿನ್ನ	31,990
ಒಡವೆ ಚಿನ್ನ	30,110

ಬೆಳ್ಳಿ	
ಬೆಂಗಳೂರು, ಪ್ರತಿ ಕೆಜಿಗೆ	
ಶುದ್ಧ ಬೆಳ್ಳಿ	43,769
ಮುಂಬೈ, ಪ್ರತಿ ಕೆಜಿಗೆ	
ಶುದ್ಧ ಬೆಳ್ಳಿ	43,733

ಕೋಳಿ/ಮೊಟ್ಟೆ

ಇವತ್ತಿನ ರೇಟ್	
100ಕ್ಕೆ	362
ಸುಗುಣ ಚಿಕನ್	
ಕೆ.ಜಿ.	67
ವೆಂಕೋಬ್ ಚಿಕನ್	
ಕೆ.ಜಿ.	100

ರೇಷ್ಮೆ (ರಾಮನಗರ–ಕೆ.ಗೆ)

ಬೈವೋಲ್ಟಿನ್	335-628
ಮಿಶ್ರತಳಿ	228-480

ಏಲಕ್ಕಿ ಪ್ರತಿ ಕೆ.ಜಿ. (ಹಸಿರು)

ಸಕಲೇಶಪುರ	630
ಮಡಿಕೇರಿ	550

ಅಡಕೆ ಶಿವಮೊಗ್ಗ

ಕ್ವಿಂಟಾಲ್‌ಗೆ

ಗೊರಬಲು	21,269
ರಾಶಿ	36,589
ಸರಕು	55,599

ಎಪಿಎಂಸಿ

ಯಶವಂತಪುರ

ಅಕ್ಕಿ - ಸೋನಾ ಮಸೂರಿ	
ದಪ್ಪ	4,300
ಐಆರ್–64	3,850
ಮಧ್ಯಮ	5,600
ರಾಗಿ (ಉತ್ತಮ)	3,400
ರಾಗಿ(ಸ್ಥ)	2,800
ಜೋಳ (ವಿಜಯಪುರ)	3000
ಅಚ್ಚುಬೆಲ್ಲ	4,500
ಮುದ್ದೆಬೆಲ್ಲ	4,500
ಧನಿಯಾ (ಸ್ಥ)	12,000
ಬ್ಯಾಡಗಿ ಮೆಣಸು.	18,000
ಗುಂಟೂರು ಮೆ.	9,600
ಬಿಳಿ ಈರುಳ್ಳಿ	980
ಸಣ್ಣ ಈರುಳ್ಳಿ (ಸ್ಥ)	2,000
ಬೆಳ್ಳುಳ್ಳಿ	5,000
ಹೆಸರುಕಾಳು (ಸ್ಥ)	7,800
ಬಟಾಣಿ (ಹಸಿ)	6,000
ಗೋಧಿ (ಸ್ಥ)	3,300
ಕಡಲೆಬೇಳೆ	5,200
ಅವರೆಬೇಳೆ	5,800
ತೊಗರಿಬೇಳೆ	7,200
ಹೆಸರುಬೇಳೆ	7,400

ಕಾಫಿಧಾರಣೆ

ಚಿಕ್ಕಮಗಳೂರು	50ಕೆಜಿ
ಅರೇಬಿಕಾ ಪಾರ್ಚ್‌ಮೆಂಟ್	8,600
ಅರೇಬಿಕಾ ಚೆರ್ರಿ	3,850
ರೋಬೊಸ್ಟ ಪಾರ್ಚ್‌ಮೆಂಟ್	5650
ರೋಬೊಸ್ಟ ಚೆರ್ರಿ	3125

ಹಾಪ್‌ಕಾಮ್ಸ್

ಟೊಮೆಟೊ	15
ಆಲೂಗೆಡ್ಡೆ	30
ಕ್ಯಾರೆಟ್ (ನಾಟಿ)	27
ಹುರುಳಿಕಾಯಿ	75
ಕ್ಯಾಬೇಜ್	13
ಹೂಕೋಸು	36
ಹಸಿಮೆಣಸಿನಕಾಯಿ	33
ಕೊತ್ತಂಬರಿಸೊಪ್ಪು	88(ಕಟ್ಟು)
ಮೆಂತೆಸೊಪ್ಪು	40(ಕಟ್ಟು)
ಬೆಂಡೆಕಾಯಿ	34
ಸೌತೆಕಾಯಿ	22
ಅವರೆಕಾಯಿ	42
ಅಣಬೆ	200
ಕುಂಬಳಕಾಯಿ	13
ಸ್ವೀಟ್ ಕಾರ್ನ್	46
ಪಚ್ಚಬಾಳೆ	28
ಏಲಕ್ಕಿ ಬಾಳೆ	48
ಕಿತ್ತಳೆ	65
ಮೊಸಂಬಿ	100
ಕಲ್ಲಂಗಡಿ	23
ಕರಬೂಜ	38
ಪಪ್ಪಾಯಿ	24
ದ್ರಾಕ್ಷಿ	50
ಬೀಟ್ ರೂಟ್	23
ಬೀನ್ಸ್	54
ಹಾಗಲ ಕಾಯಿ	35
ಪಾಲಕ್ ಸೊಪ್ಪು	46
ಬೇಬಿ ಕಾರ್ನ್	28

ಗೆಲುವಿನ ಯಾತ್ರೆ ಮುಂದುವರಿಸಿದ ಮೋದಿ- ಶಾ ಜೋಡಿ | ಪ್ರಧಾನಿ ಹೋಂ ವರ್ಕ್ ಯಶಸ್ವಿ

ಬಿಜೆಪಿ ಮೇಲುಗೈಗೆ ಕಾರಣವಾದ ಪಂಚ ಸೂತ್ರಗಳು

ದೆಹಲಿ: ಯಾರು ಏನೇ ಹೇಳಿದರೂ ಕರ್ನಾಟಕದಲ್ಲಿ ಬಿಜೆಪಿಯ ಪ್ರಚಂಡ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರದ ವೈಖರಿಯೇ ಕಾರಣ ಎನ್ನುವುದನ್ನು ಅವರ ವಿರೋಧಿ ಪಾಳಯವೂ ಒಪ್ಪುತ್ತದೆ.

ರಾಜ್ಯದಲ್ಲಿ ಚುನಾವಣೆ ಗೆಲ್ಲಲು ಬಿಜೆಪಿಯ ಟ್ರಂಪ್ ಕಾರ್ಡ್ ಮೋದಿ. ಕಾಂಗ್ರೆಸ್ ನಾಯಕರಿಗೆ ಇದು ತಿಳಿದಿತ್ತಾದರೂ ಮೋದಿಯೊಬ್ಬರೇ ಗೆಲುವಿನ ದಡ ದಾಟಿಸಲು ಸಾಧ್ಯವಾಗುವುದಿಲ್ಲ. ಸ್ಥಳೀಯ ಸಮಸ್ಯೆಗಳನ್ನು ದಾಟಿ ಬಿಜೆಪಿ ಬಹುಮತ ಗಳಿಸಲು ಅಸಾಧ್ಯ ಎನ್ನುವುದು ಕಾಂಗ್ರೆಸ್ ನಾಯಕರ ಅಭಿಪ್ರಾಯವಾಗಿತ್ತು.

ಕರ್ನಾಟಕದ ಚುನಾವಣೆಯಲ್ಲಿ ಬಿಜೆಪಿಯ ಟ್ರಂಪ್ ಕಾರ್ಡ್ ಯಶಸ್ವಿಯಾಗಿದೆ. ನರೇಂದ್ರ ಮೋದಿ ಬಿಜೆಪಿಗೆ ಮತ್ತೊಂದು ಗೆಲುವನ್ನು ತಂದು ಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ ಗೆಲುವಿಗೆ ಐದು ಪ್ರಮುಖ ಅಂಶಗಳನ್ನು ರಾಷ್ಟ್ರೀಯ ಬಿಜೆಪಿ ನಾಯಕರು ಗುರುತಿಸುತ್ತಾರೆ.

1. ರ‍್ಯಾಲಿಗಳ ಹೆಚ್ಚಳ

ಚುನಾವಣೆಯಲ್ಲಿ 15 ರ‍್ಯಾಲಿಗಳನ್ನು ನಡೆಸಲು ನಿರ್ಧರಿಸಿದ್ದ ಪ್ರಧಾನಿ ಮೋದಿ ಆ ನಂತರ ರ‍್ಯಾಲಿಗಳ ಸಂಖ್ಯೆಯನ್ನು 21ಕ್ಕೆ ಹೆಚ್ಚಿಸಿದರು. ಕೆಲವರು ಈ ನಿರ್ಧಾರವನ್ನು ದುರ್ಬಲ ನಡೆ ಎಂದು ಪರಿಗಣಿಸಿದರಾದರೂ ಮೋದಿ ಅವರ ರ‍್ಯಾಲಿಗಳಿಗೆ ಅದರದ್ದೇ ಆದ ಶಕ್ತಿ ಇರುತ್ತದೆ ಎನ್ನುವುದನ್ನು ಈ ಫಲಿತಾಂಶ ಮತ್ತೊಮ್ಮೆ ಸಾಬೀತುಪಡಿಸಿದೆ. ಗುಜರಾತ್‌ನಲ್ಲಿ 30 ಮತ್ತು ಉತ್ತರ ಪ್ರದೇಶದಲ್ಲೂ ಅತಿ ಹೆಚ್ಚು ರ‍್ಯಾಲಿಗಳನ್ನು ನಡೆಸಿದ್ದರಿಂದಲೇ ಪಕ್ಷ ಅಧಿಕಾರಕ್ಕೆ ಬಂದಿದೆ ಎನ್ನುವುದನ್ನು ಮರೆಯುವಂತಿಲ್ಲ. ಅಲ್ಲದೆ ಪ್ರತಿ ರ‍್ಯಾಲಿಯಲ್ಲೂ ಆಯಾ ಜಿಲ್ಲೆ ಮತ್ತು ಪ್ರಾದೇಶಿಕ ಅಸ್ಮಿತೆಯ ಆಧಾರದ ಮೇಲೆ ಭಾಷಣ ಮಾಡುತ್ತಿದ್ದ ವೈಖರಿ ಮತದಾರರ ಮೇಲೆ ಪರಿಣಾಮ ಬೀರಿರುವುದನ್ನು ಉಪೇಕ್ಷೆ ಮಾಡುವಂತಿಲ್ಲ.

2. ‘ಭ್ರಷ್ಟಾಚಾರ’ಕ್ಕೆ ಹೆಚ್ಚಿನ ಮಹತ್ವ

ಭ್ರಷ್ಟಾಚಾರದ ಆರೋಪ ಹೊತ್ತಿದ್ದ ಬಿ.ಎಸ್. ಯಡಿಯೂರಪ್ಪ ಮತ್ತು ರೆಡ್ಡಿ ಸಹೋದರರಿಗೆ ಮತ್ತೆ ಟಿಕೆಟ್ ನೀಡಿದ್ದನ್ನು ಪ್ರಸ್ತಾಪಿಸುವ ಮೂಲಕ ಕಾಂಗ್ರೆಸ್ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಆದರೆ ಪ್ರಧಾನಿ ಮೋದಿ ಇದನ್ನು ಎರಡು ವಿಧಾನಗಳಲ್ಲಿ ಬದಲಾಯಿಸಿದರು. ಕ್ಲೀನ್ ಇಮೇಜ್ ಹೊಂದಿರುವ ಮೋದಿ ಕಪ್ಪು ಹಣದ ಪ್ರಸ್ತಾಪ ಮತ್ತು ಕಾಂಗ್ರೆಸ್ ಪಕ್ಷವೇ ಕಪ್ಪು ಹಣ ಸೃಷ್ಟಿಯಾಗಲು ಕಾರಣ ಎಂದು ಪ್ರತಿಪಾದಿಸುವ ಮೂಲಕ ಮತದಾರರ ಮನ ಗೆಲ್ಲುವಲ್ಲಿ ಯಶಸ್ವಿಯಾದರು. ನ್ಯಾಶನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಮತ್ತು ರಾಹುಲ್ ಅವರೂ ಜಾಮೀನಿನ ಮೇಲೆ ಹೊರಗಿರುವುದನ್ನು ಜನತೆಯ ಮುಂದಿಟ್ಟರು.

3. ಕೈ ಹಿಡಿದ ಕಲ್ಯಾಣ ಕಾರ್ಯಕ್ರಮಗಳು

ತಾವು ಜಾರಿಗೆ ತಂದ ಕಲ್ಯಾಣ ಕಾರ್ಯಕ್ರಮಗಳು ಕೈ ಹಿಡಿಯುತ್ತವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಬಲವಾಗಿ ನಂಬಿತ್ತು. ಆದರೆ ಮೋದಿ ಇವರನ್ನು ಹಿಂದಿಕ್ಕಿ ಸ್ವಚ್ಛತಾ ಅಭಿಯಾನಾ, ಆರೋಗ್ಯ, ವಸತಿ, ಜನ್‌ಧನ್ ಮೊದಲಾದ ಕೇಂದ್ರ ಸರಕಾರದ ಕಾರ್ಯಕ್ರಮಗಳನ್ನು ಮನದಟ್ಟು ಮಾಡಿಕೊಡುತ್ತಾ ಸಿದ್ದರಾಮಯ್ಯ ಅವರನ್ನು ಹಿಂದಿಕ್ಕುವಲ್ಲಿ ಗೆಲುವು ಸಾಧಿಸಿದರು.

4. ಆಧಾರವಾದ ‘ದಲಿತ’ರು.

ಸಿದ್ದರಾಮಯ್ಯ ಅಹಿಂದ ಮತಗಳನ್ನು ನೆಚ್ಚಿಕೊಂಡಿದ್ದಾರೆ ಎನ್ನುವುದನ್ನು ಮೊದಲೇ ಊಹಿಸಿದ್ದ ಪ್ರಧಾನಿ ಮೋದಿ ತಿರುಗೇಟು ನೀಡಲು ದೆಹಲಿಯಿಂದ ಸಜ್ಜಾಗಿಯೇ ಬಂದಿದ್ದರು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಯಾವ ರೀತಿ ನಡೆಸಿಕೊಂಡಿತು ಎನ್ನುವುದನ್ನು ಆ ವರ್ಗಗಳ ಮತದಾರರಿಗೆ ಮುಟ್ಟಿಸುವಲ್ಲಿ ಅವರು ಚಾಣಾಕ್ಷತನ ಕೈ ಹಿಡಿದಿತ್ತು. ಕೊನೆಯ ದಿನಗಳಲ್ಲಿ ನಮೋ ಆಪ್ ಮೂಲಕ ಎಸ್‌ಸಿ, ಎಸ್‌ಟಿ ಮೋರ್ಚಾಗಳ ಜತೆ ಸಂವಾದ ನಡೆಸಿದ್ದೂ ಬಿಜೆಪಿಗೆ ವರದಾನವಾಯಿತು.

5. ಹಿಂದೂ ಎಂಬ ಅಸ್ತ್ರ

ಕಾಂಗ್ರೆಸ್‌ನ ಮತ ಬ್ಯಾಂಕ್ ಅಲ್ಪಸಂಖ್ಯಾತರು ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಅಸ್ತ್ರಕ್ಕೆ ಪರ್ಯಾಯವಾಗಿ ಮೋದಿ ಹಿಂದೂ ಎಂಬ ಅಸ್ತ್ರವನ್ನು ಹೂಡಿತು. ತಮ್ಮ ಎಲ್ಲಾ ರ‍್ಯಾಲಿಗಳಲ್ಲೂ ಮೋದಿ ಕರ್ನಾಟಕದಲ್ಲಿ ನಡೆದ ಹಿಂದೂ ಕಾರ್ಯಕರ್ತರ ಹತ್ಯೆಯನ್ನು ಪ್ರಸ್ತಾಪಿಸುತ್ತಾ ಹೋದರು. ವೀರಶೈವ–ಲಿಂಗಾಯತರನ್ನು ಒಡೆದಿದ್ದರ ಲಾಭವನ್ನು ಬಿಜೆಪಿ ಬಳಸಿಕೊಳ್ಳುವಲ್ಲಿ ಜಯ ಸಾಧಿಸಿದರು. ಅಣ್ಣ ತಮ್ಮಂದಿರಲ್ಲೇ ಜಗಳ ತಂದಿಡುತ್ತಿದ್ದಾರೆ ಎಂದು ಮೋದಿ ಹಿಂದೂಗಳ ಮನ ಗೆಲ್ಲುವಲ್ಲಿ ನಿರೀಕ್ಷಿತ ಯಶಸ್ಸು ಕಂಡರು.

ಅಧಿಕಾರ ಪಡೆದುಕೊಳ್ಳಲು ಅಂತಿಮವಾಗಿ ಬೇಕಿರುವುದು ಶಾಸಕರ ಸಂಖ್ಯಾ ಬಲ. ಈ ಬಲ ಈಗ ಕಾಂಗ್ರೆಸ್–ಜೆಡಿಎಸ್ ನಡುವೆ ಎದ್ದು ಕಾಣುತ್ತಿದೆ. ಆದರೆ 40 ಸ್ಥಾನಗಳಿಂದ 107 ಸ್ಥಾನಗಳವರೆಗೆ ಪಕ್ಷವನ್ನು ತಂದು ನಿಲ್ಲಿಸಿದ್ದು ಮೋದಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಾಂಗ್ರೆಸ್ ಬಿಜೆಪಿ ನಡುವೆ ಜೆಡಿಎಸ್ ಎಂಬ ಪ್ರಾದೇಶಿಕ ಪಕ್ಷವೊಂದಿಲ್ಲದಿದ್ದರೆ ಅಧಿಕಾರದ ಚುಕ್ಕಾಣಿಯನ್ನು ಯಾರು ಹಿಡಿಯುತ್ತಿದ್ದರು ಎನ್ನುವುದು ಯಾರಿಗೂ ತಿಳಿಯದ ವಿಷಯವೇನಲ್ಲ.

ನಿವೃತ್ತಿ ಪಿಂಚಣಿಗೆ ಆಧಾರ್ ಕಡ್ಡಾಯವಲ್ಲ- ಜಿತೇಂದ್ರ ಸಿಂಗ್

ದೆಹಲಿ: ಸರಕಾರಿ ಕೆಲಸದಿಂದ ನಿವೃತ್ತಿ ಹೊಂದಿದವರಿಗೆ ಪಿಂಚಣಿ ಪಡೆಯಲು ಆಧಾರ್ ಕಾರ್ಡ್ ಕಡ್ಡಾಯವಲ್ಲ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಸ್ಪಷ್ಟನೆಯನ್ನು ನೀಡಿದ್ದಾರೆ.

ನಿವೃತ್ತಿ ಹೊಂದಿರುವ ವ್ಯಕ್ತಿಗಳು ಪಿಂಚಣಿ ಪಡೆಯುವ ಸಂದರ್ಭದಲ್ಲಿ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಲಿಂಕಿಂಗ್ ನಡೆದಿಲ್ಲ ಎನ್ನುವ ಕಾರಣದಿಂದ ಅನೇಕ ರೀತಿಯ ಕಷ್ಟಗಳನ್ನು, ಸಮಸ್ಯೆಗಳನ್ನು ಅನುಭವಿಸುತ್ತಿದ್ದು, ಈ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಆಧಾರ್ ಕಡ್ಡಾಯವಲ್ಲ ಎಂದು ತಿಳಿಸಿದ್ದಾರೆ.

ಯುನಿಕ್ ಐಡೆಂಟಿಫಿಕೇಷನ್ ಅಥಾರಿಟಿ ಆಫ್ ಇಂಡಿಯಾ ನೀಡಲ್ಪಟ್ಟಿರುವ ಆಧಾರ್ ಕಾರ್ಡ್ ಕೇವಲ ಹನ್ನೆರಡು ಸಂಖ್ಯೆಗಳುಳ್ಳ ಚೀಟಿಯಷ್ಟೇ, ಅದು ವ್ಯಕ್ತಿಯ ಪರಿಚಯ ಮತ್ತು ಆತನ ವಿಳಾಸಕ್ಕೆ ಖಾತ್ರಿಯನ್ನು ನೀಡುವ ಕೆಲಸವನ್ನು ಮಾಡುತ್ತದೆ. ಭಾರತದಲ್ಲಿ ಸುಮಾರು 48 ಲಕ್ಷಕ್ಕೂ ಅಧಿಕ ಸರಕಾರಿ ನೌಕರರಿದ್ದಾರೆ ಮತ್ತು 61 ಲಕ್ಷಕ್ಕೂ ಹೆಚ್ಚು ಪಿಂಚಣಿದಾರರಿದ್ದಾರೆ ಎಂದು ಈ ಸಂದರ್ಭದಲ್ಲಿ ತಿಳಿಸಿರುವ ಸಚಿವರು, ಅವರೆಲ್ಲರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಈ ಕ್ರಮಕ್ಕೆ ಮುಂದಾಗಿರುವುದಾಗಿ ತಿಳಿಸಿದ್ದಾರೆ.

भारत सरकार
GOVERNMENT OF INDIA
Name XXXX
DOB: XX-XX-XXXX
Gender: MALE
0000 1111 2222
आधार - आम आदमी का अधिकार

ಜಮ್ಮು ಕಾಶ್ಮೀರ ಗಡಿಯಲ್ಲಿ ಹೈ ಅಲರ್ಟ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಅಂತಾರಾಷ್ಟ್ರೀಯ ಗಡಿಯಲ್ಲಿ ಸಂಶಯಾಸ್ಪದ ವ್ಯಕ್ತಿಗಳು ಬಂದು ಹೋಗುತ್ತಿರುವ ಬಗ್ಗೆ ಮಾಹಿತಿಯಿರುವುದರಿಂದ, ರಾಜ್ಯಾದ್ಯಂತ ಹೈ ಅಲರ್ಟ್ ಘೋಷಿಸಿರುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ. ಮುಂದಿನ ಶನಿವಾರದಂದು ಪ್ರಧಾನಿ ಮೋದಿ ಜಮ್ಮು ಮತ್ತು ಕಾಶ್ಮೀರಕ್ಕೆ ಆಗಮಿಸುತ್ತಿದ್ದು, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆಯಾಗಿ ಹೈ ಅಲರ್ಟ್ ಘೋಷಿಸಲಾಗಿದೆ.

ಪ್ರಧಾನಿ ಮೋದಿ ಭೇಟಿಯ ಸಂದರ್ಭದಲ್ಲಿ ದುಷ್ಕೃತ್ಯಗಳನ್ನು ನಡೆಸಲು ಉಗ್ರರು ಹೊಂಚು ಹಾಕುತ್ತಿರುವ ಬಗ್ಗೆ ಮಾಹಿತಿ ಪಡೆದಿರುವ ಭದ್ರತಾ ಪಡೆಗಳು ಕಾರ್ಯಾಚರಣೆಯನ್ನು ಬಿಗಿಗೊಳಿಸಿವೆ. ಗಡಿ ಭಾಗದ ಜಿಲ್ಲೆಗಳಲ್ಲಿ ಸಂಶಯಾಸ್ಪದವಾಗಿ ಅನಾಮಿಕ ವ್ಯಕ್ತಿಗಳು ತಿರುಗಾಟ ನಡೆಸುತ್ತಿದ್ದು, ಅನಧಿಕೃತ ಚಟುವಟಿಕೆಗಳನ್ನು ನಡೆಸುತ್ತಿರುವ ಹಿನ್ನಲೆಯಲ್ಲಿ ಕಥುವಾ, ಸಾಂಬಾ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಲ್ಲದೆ ತರ್ಹಾನ್ ಅಲ್ಲಾಹ್ ಗಡಿಯಲ್ಲಿ ಪಾಕ್ ಉಗ್ರರು ಅಕ್ರಮವಾಗಿ ನುಸುಳಲು ಯತ್ನಿಸುತ್ತಿದ್ದು, ಅಲ್ಲಿಯೂ ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ದಾಳಿಗೆ ಯೋಧ ಬಲಿ

ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯಲ್ಲಿ ಪಾಕ್ ಸೈನ್ಯ ನಡೆಸಿದ ಅಪ್ರಚೋದಿತ ಗುಂಡಿನ ದಾಳಿಗೆ ಭಾರತೀಯ ಭದ್ರತಾ ಪಡೆ ಬಿಎಸ್‌ಎಫ್‌ನ ಓರ್ವ ಯೋಧ ಬಲಿಯಾಗಿದ್ದಾರೆ. ಮೃತನನ್ನು ಪೇದೆ ದೇವೇಂದ್ರ ಸಿಂಗ್ ಎಂದು ಗುರುತಿಸಲಾಗಿದ್ದು, ಪಾಕ್ ದಾಳಿಗೆ ಗಾಯಗೊಂಡ ಇವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದ್ದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಅಂತರಾಷ್ಟ್ರೀಯ ಗಡಿಗಳಲ್ಲಿ ಹದ್ದು ಮೀರಿದ ವರ್ತನೆಯಿಂದ ಅಪ್ರಚೋದಿತ ಗುಂಡಿನ ದಾಳಿ ನಡೆಸುತ್ತಿರುವ ಪಾಕ್‌ನ ಗುಂಡಿಗೆ ಭಾರತೀಯ ಯೋಧರು ಸರಿಯಾದ ಪ್ರತ್ಯುತ್ತರವನ್ನೇ ನೀಡುತ್ತಿದ್ದಾರೆ ಎಂದು ಭದ್ರತಾ ಮೂಲಗಳು ಮಾಹಿತಿ ನೀಡಿವೆ. ಅಲ್ಲದೆ ಸಾಂಬಾ ಪ್ರದೇಶದಲ್ಲಿ ಎರಡೂ ಸೇನೆಗಳೂ ದಾಳಿ ಪ್ರತಿದಾಳಿಗಳನ್ನು ನಡೆಸುತ್ತಿರುವುದಾಗಿ ಅಧಿಕೃತ ಮೂಲಗಳು ತಿಳಿಸಿವೆ.

ಚುನಾವಣೆಗೆ ಬ್ಯಾಲಟ್ ಪೇಪರ್: ಎನ್‌ಸಿಪಿ

ದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶಕ್ಕೆ ಆಶ್ಚರ್ಯ ವ್ಯಕ್ತಪಡಿಸಿರುವ ಮಾಜಿ ಕೇಂದ್ರ ಸಚಿವ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಮತಯಂತ್ರಗಳಿಗೆ ಬದಲಾಗಿ ಬ್ಯಾಲಟ್ ಪೇಪರ್‌ಗಳನ್ನು ಬಳಸಬೇಕು ಎಂದು ಒತ್ತಾಯಿಸಿದೆ. ಫಲಿತಾಂಶದ ನಂತರ ಪ್ರತಿಕ್ರಿಯೆ ನೀಡಿರುವ ಎನ್‌ಸಿಪಿ ಅಧ್ಯಕ್ಷ ಜಯಂತ್ ಪಾಟೀಲ್ ಕರ್ನಾಟಕದಲ್ಲಿ ಕಾಂಗ್ರೆಸ್ ಉತ್ತಮ ಸ್ಥಾನದಲ್ಲಿದ್ದು ಆಡಳಿತ ವಿರೋಧಿ ಅಲೆ ಎದುರಿಸುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ಆಶ್ಚರ್ಯವನ್ನುಂಟು ಮಾಡಿದೆ ಎಂದು ತಿಳಿಸಿದ್ದಾರೆ. ಮುಂಬರುವ ಎಲ್ಲಾ ಚುನಾವಣೆಗಳನ್ನು ಬ್ಯಾಲಟ್ ಪೇಪರ್‌ಗಳ ಮೂಲಕ ನಡೆಸುವಂತೆ ಅವರು ಒತ್ತಾಯಿಸಿದ್ದಾರೆ. ಕರ್ನಾಟಕದಲ್ಲಿ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸದಂತೆ ಎನ್‌ಸಿಪಿ ಕಾಂಗ್ರೆಸ್‌ಗೆ ಬೆಂಬಲ ವ್ಯಕ್ತಪಡಿಸಿತ್ತು.

Shekhar Chai MODI
सोनिया गांधी
कांग्रेस

ಕರ್ನಾಟಕದಲ್ಲಿ ಬಿಜೆಪಿ ಗೆಲುವು ಸಾಧಸಿದ್ದಕ್ಕೆ ದೆಹಲಿಯ ಪಕ್ಷದ ಕೇಂದ್ರ ಕಚೇರಿ ಎದುರು ಕಾರ್ಯಕರ್ತರು ಪಟಾಕಿ ಸಿಡಿಸಿ, ಡೋಲು ಬಡಿದು ಓಕುಳಿಯಾಡಿ ಸಂಭ್ರಮಿಸಿದ ಕ್ಷಣ

ಕರ್ನಾಟಕದ ಫಲಿತಾಂಶ ರಾಷ್ಟ್ರ ರಾಜಕಾರಣದ ದಿಕ್ಸೂಚಿ

ದೆಹಲಿ: ಕರ್ನಾಟಕದಲ್ಲಿನ ವಿಧಾನ ಸಭಾ ಚುನವಣಾ ಫಲಿತಾಂಶ ರಾಷ್ಟ್ರ ರಾಜಕಾರಣದಲ್ಲಿ ಸಂಚಲನ ಮೂಡಿಸಲಿದೆ ಎಂದು ಯೋಗ ಗುರು ಬಾಬಾ ರಾಮ್‌ದೇವ್ ತಿಳಿಸಿದ್ದಾರೆ.

ವಾರಣಾಸಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ರಾಮ್‌ದೇವ್ ಮುಂದಿನ 2019ರ ಚುನಾವಣೆಯ ದೃಷ್ಟಿಯಿಂದ ಕರ್ನಾಟಕ ವಿಧಾನ ಸಭಾ ಚುನಾವಣೆಯ ಫಲಿತಾಂಶ ಅತ್ಯಂತ ಮುಖ್ಯವಾಗಲಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ಮುಂದಿನ ದಿನಗಳಲ್ಲಿ ಬಿಜೆಪಿ ದಕ್ಷಿಣ ರಾಜ್ಯಗಳಲ್ಲಿ ಅಧಿಕಾರ ನಡೆಸಲಿದೆ ಎಂದೂ ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ಚಿದಂಬರಂ ಅವರ ವಿರುದ್ಧ ಹರಿಹಾಯ್ದಿರುವ ರಾಮ್‌ದೇವ್, ಅವರ ಬಂಡವಾಳಗಳೆಲ್ಲ ಬಯಲಾಗುತ್ತಿದ್ದು, ಅವರು ಮಾಡಿದ ತಪ್ಪುಗಳು ನಿಧಾನವಾಗಿ ಬಹಿರಂಗಗೊಳ್ಳುವುದಕ್ಕೆ ಆರಂಭವಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ಅಲಿಘರ್‌ನ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ನಡೆದ ಮಹಮ್ಮದ್ ಅಲಿ ಜಿನ್ನಾ ಭಾವಚಿತ್ರ ಪ್ರಕರಣದ ಬಗ್ಗೆ ಮಾತನಡಿರುವ ಬಾಬಾ, ದೇಶ ಇಬ್ಭಾಗವಾಗುವುದಕ್ಕೆ ಕಾರಣರಾದವರು ಈ ದೇಶಕ್ಕೆಂದೂ ಮಾದರಿಗಳಾಗಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ವಾಟ್ಸಾಪ್ ಚುನಾವಣೆ ವಿದೇಶಿ ಮಾಧ್ಯಮ ಬಣ್ಣನೆ

ದೆಹಲಿ: ಕರ್ನಾಟಕ ರಾಜ್ಯ ವಿಧಾನ ಸಭೆ ಚುನಾವಣೆಯನ್ನು ವಿದೇಶಿ ಮಾಧ್ಯಮಗಳ ‘ಮೊದಲ ವಾಟ್ಸಾಪ್ ಚುನಾವಣೆ’ ಎಂದು ಅಂತಾರಾಷ್ಟ್ರೀಯ ಮಾಧ್ಯಮಗಳು ಬಿಂಬಿಸಿವೆ. ಕಾಂಗ್ರೆಸ್ ಹಾಗೂ ಬಿಜೆಪಿ ಈ ಚುನಾವಣೆಗಾಗಿ ಸುಮಾರು 20 ಸಾವಿರಕ್ಕೂ ಹೆಚ್ಚು ವಾಟ್ಸಾಪ್ ಗ್ರೂಪ್ ರಚನೆ ಮಾಡಿರುವುದಾಗಿ ತಿಳಿಸಿವೆ. ಹೀಗಾಗಿ ಇದು ವಾಟ್ಸಾಪ್ ಚುನಾವಣೆ ಎಂದ ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಚುನಾವಣೆಯಲ್ಲಿ ವಾಟ್ಸಾಪ್ ಬಳಕೆ ಉಪಯೋಗದ ಜತೆಗೆ ಅನಾನುಕೂಲಗಳನ್ನು ಹೊಂದಿದ್ದು, ಅಪಾರ ಪ್ರಮಾಣದಲ್ಲಿ ಸುಳ್ಳು ಮಾಹಿತಿ ಹರಿಬಿಡಲಾಗುತ್ತಿದೆ. ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಬೇರೆ ಪಕ್ಷದ ವಿರುದ್ಧ ಸುಳ್ಳು ಮಾಹಿತಿ ಹರಿದುಬಿಡುತ್ತವೆ. ಇದನ್ನು ಹೇಗೆ ನಿಯಂತ್ರಿಸಬೇಕು ಎಂಬುದರ ಬಗ್ಗೆ ವಾಟ್ಸಾಪ್ ಬಳಿ ಯಾವುದೇ ಉಪಾಯವಿಲ್ಲವಾಗಿದೆ ಎಂದು ತಿಳಿಸಲಾಗಿದೆ.

ಕಾಂಗ್ರೆಸ್–ಜೆಡಿಎಸ್ ಮೈತ್ರಿಯಾಗಬೇಕಿತ್ತು

ದೆಹಲಿ: ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮುನ್ನಡೆ ಸಾಧಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾಂಗ್ರೆಸ್ ಮತ್ತು ಜೆಡಿಎಸ್ ಚುನಾವಣೆ ಪೂರ್ವ ಮೈತ್ರಿ ಮಾಡಿಕೊಂಡಿದ್ದರೆ, ಇಡೀ ಚಿತ್ರಣವೇ ಸಂಪೂರ್ಣ ವಾಗಿ ಭಿನ್ನವಾಗಿರುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ಟ್ವಿಟರ್ ಮೂಲಕ ಪ್ರತಿಕ್ರಿಯೆ ನೀಡಿರುವ ಮಮತಾ ‘ಜೆಡಿಎಸ್ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದರೆ, ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗುತ್ತಿತ್ತು. ಆದರೂ ಗೆದ್ದ ಅಭ್ಯರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಸೋಲನುಭವಿಸಿರುವವರು ಮುಂದಿನ ಬಾರಿ ಮತ್ತೆ ಹೋರಾಟ ಮಾಡಿ.’ ಎಂದು ಹೇಳಿದ್ದಾರೆ.

ಕಾಂಗ್ರೆಸ್ ತಿರಸ್ಕೃತ: ನಿರ್ಮಲಾ

ದೆಹಲಿ: ಕರ್ನಾಟಕ ಚುನಾವಣೆಯಲ್ಲಿ ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್, ‘ಇಂದು ಬಿಜೆಪಿ ಪಾಲಿಗೆ ಐತಿಹಾಸಿಕ ಜಯವಾಗಿದೆ. ಅಭಿವೃದ್ಧಿಯ ವಿಷಯವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ನಿರಂತರ ಪ್ರಚಾರ ಪಕ್ಷಕ್ಕೆ ವರವಾಗಿದೆ. ಕಾಂಗ್ರೆಸ್‌ನ ಒಡೆದು ಆಳುವ ನೀತಿಯನ್ನು ಕರ್ನಾಟಕದ ಜನತೆ ಸಂಪೂರ್ಣವಾಗಿ ತಿರಸ್ಕರಿಸಿದೆ’ ಎಂದಿದ್ದಾರೆ.

ಮುಫ್ತಿ ಶುಭಾಶಯ

ಶ್ರೀನಗರ: ದಕ್ಷಿಣ ಭಾರತದಲ್ಲಿ ಬಿಜೆಪಿ ಶಕೆ ಆರಂಭವಾಗಲಿದೆ. ಕರ್ನಾಟಕದಲ್ಲಿ ಬಿಜೆಪಿ ಪಕ್ಷದಿಂದ ಜಯಗಳಿಸಿದ ಎಲ್ಲಾ ಅಭ್ಯರ್ಥಿಗಳಿಗೂ ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಮೆಹಬೂಬ್ ಮುಫ್ತಿ ತಮ್ಮ ಟ್ವೀಟ್ಟರ್ ಖಾತೆಯ ಮೂಲಕ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಲೋಕ್‌ಪಾಲ್ ಆಯ್ಕೆ ಸಮಿತಿಗೆ ರೋಹಟಗಿ ನೇಮಕ

ದೆಹಲಿ: ಲೋಕ್‌ಪಾಲ್ ಆಯ್ಕೆ ಸಮಿತಿಗೆ ಹಿರಿಯ ನ್ಯಾಯವಾದಿ ಮುಕುಲ್ ರೋಹಟಗಿ ಅವರನ್ನು ನೇಮಕ ಮಾಡಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರಕಾರ ತಿಳಿಸಿದೆ.

ನ್ಯಾಯಮೂರ್ತಿ ರಂಜನ್ ಗೋಯಿ ನೇತೃತ್ವದ ಪೀಠಕ್ಕೆ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಪ್ರಧಾನಿ ಅಧ್ಯಕ್ಷತೆಯ ಸಮಿತಿಗೆ ಮುಕುಲ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿರುವ ವಿಷಯವನ್ನು ತಿಳಿಸಿದರು. ಲೋಕ್‌ಪಾಲ್ ಆಯ್ಕೆಗೆ ಈ ಸಮಿತಿ ಮೇ.11ರಂದು ಸಭೆ ಸೇರಲಿದೆ. ರೋಹಟಗಿ ಅವರನ್ನು ಪ್ರಧಾನಿ ಮೋದಿ ಸರಕಾರ ಮೇ.2014ರಲ್ಲಿ ಅಟಾರ್ನಿ ಜನರಲ್ ಆಗಿ ನೇಮಕ ಮಾಡಿತ್ತು. ಆದರೆ ಅವರು ಸೆಪ್ಟೆಂಬರ್ 2017ರಲ್ಲಿ ರಾಜೀನಾಮೆ ಸಲ್ಲಿಸಿದ್ದರು.

ಸುಪ್ರೀಂ ಕೋರ್ಟ್ ಲೋಕ್‌ಪಾಲ್‌ರನ್ನು ನೇಮಕ ಮಾಡಿಲ್ಲದಿರುವುದನ್ನು ಪ್ರಶ್ನಿಸಿ ಕಾಮನ್ ಕಾಸ್ ಎಂಬ ಸ್ವಯಂಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸುತ್ತಿದೆ.

ನನ್ನ ಬೆಂಬಲ ರಾಹುಲ್‌ಗೆ: ಸಿಧು

ದೆಹಲಿ: ಕರ್ನಾಟಕ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಕಂಡಿದೆ. ಪಕ್ಷದ ಕಾರ್ಯಕರ್ತರು ಪ್ರಿಯಾಂಕಾ ಗಾಂಧಿಯನ್ನು ಕರೆದುಕೊಂಡು ಬನ್ನಿ ಎಂಬ ಕೂಗು ಕೇಳಿ ಬರುತ್ತಿದ್ದರೂ, ಮಾಜಿ ಕ್ರಿಕೆಟಿಗ, ಪಂಜಾಬ್‌ನ ಸಚಿವ ನವಜೋತ್ ಸಿಂಗ್ ಸಿಧು ರಾಹುಲ್ ಪರ ಬ್ಯಾಟಿಂಗ್ ಮುಂದುವರೆಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವುದಕ್ಕೆ ರಾಹುಲ್ ಗಾಂಧಿಯೇ ಸರಿಯಾದ ವ್ಯಕ್ತಿ ಎಂದು ಅವರು ತಿಳಿಸಿದ್ದಾರೆ.

ರಾಹುಲ್ ಕಾಂಗ್ರೆಸ್ ಉಪಾಧ್ಯಕ್ಷರಾದಾಗಿನಲ್ಲಿಂದ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಖಾತೆ ತೆರೆದಿಲ್ಲ. ಅವರು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ನಂತರದಲ್ಲಿ ಮೂರನೇ ರಾಜ್ಯದಲ್ಲಿ ಕಾಂಗ್ರೆಸ್ ಹೀನಾಯ ಸೋಲನ್ನನುಭವಿಸಿದೆ. ಹೀಗಿದ್ದರೂ, ಸಿಧು ರಾಹುಲ್ ರಾಜಕೀಯ ಭವಿಷ್ಯ ಪ್ರಾಜ್ವಲ್ಯಮಾನವಾಗಿದೆ ಎಂದು ತಿಳಿಸಿದ್ದಾರೆ.

ವಾಂಶಿಕ ರಾಜಕಾರಣದಿಂದ ರಾಹುಲ್ ಕಾಂಗ್ರೆಸ್‌ನಲ್ಲಿ ನಾಯಕ ಗದ್ದುಗೆಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಹಲವು ಮೈತ್ರಿಕೂಟಗಳೂ ಅವರೊಂದಿಗೆ ಕೈ ಜೋಡಿಸಲು ಸಿದ್ಧವಾಗಿದೆ. ಅಲ್ಲದೆ ತಮ್ಮ ಮೈಯಲ್ಲಿ ರಕ್ತ ಹರಿಯುವ ವರೆಗೆ ತಾವು ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸುವುದಾಗಿ ಅವರು ತಿಳಿಸಿದ್ದಾರೆ.

₹ 1000 ದಂಡ

ಪಂಜಾಬ್ ಸಚಿವ ನವಜೋತ್ ಸಿಂಗ್ ಸಿಧು ಅವರಿಗೆ ಸುಪ್ರೀಂ ಕೋರ್ಟ್ ಒಂದು ಸಾವಿರ ರುಪಾಯಿ ದಂಡ ವಿಧಿಸಿದೆ. 30 ವರ್ಷಗಳ ಹಿಂದೆ ರಸ್ತೆಯಲ್ಲಿನ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು, ಸಿಧು ಅವರಿಗೆ ಜೈಲು ಶಿಕ್ಷೆ ಬದಲಿಗೆ ಸಾವಿರ ರು. ದಂಡ ವಿಧಿಸಿದೆ. 1988ರಲ್ಲಿ ಪಟಿಯಾಲದ ಬಳಿ ಸಿಧು ಅವರು 65 ವರ್ಷದ ವೃದ್ಧನ ಜತೆ ಜಗಳವಾಡಿದ್ದು, ವೃದ್ಧನ ಮೇಲೆ ಸಿಧು ಹಲ್ಲೆ ಮಾಡಿದ್ದರು. ಸಿಧು ಅವರ ಈ ತಪ್ಪಿಗೆ ಒಂದು ವರ್ಷ ಜೈಲು ಶಿಕ್ಷೆಯನ್ನು ವಿಧಿಸುವ ಸಾಧ್ಯತೆ ಇತ್ತು.

ಮೃತರ ಸಂಖ್ಯೆ 150ಕ್ಕೆ ಏರಿಕೆ | ದಕ್ಷಿಣ ಭಾರತದಲ್ಲೂ ಮಳೆ ಮುನ್ಸೂಚನೆ

ವ್ಯಾಪಕ ಮಳೆಗೆ ಉತ್ತರ ಭಾರತ ತತ್ತರ

ದೆಹಲಿ: ಉತ್ತರ ಭಾರತದ ರಾಜ್ಯಗಳಲ್ಲಿ ಭಾರಿ ಪ್ರಮಾಣದ ಮಳೆ, ಬಿರುಗಾಳಿ ಮತ್ತು ಸಿಡಿಲಿಗೆ ಸತ್ತವರ ಸಂಖ್ಯೆ 150ಕ್ಕೆ ಏರಿಕೆಯಾಗಿದೆ. ವರುಣನ ಆರ್ಭಟಕ್ಕೆ ಉತ್ತರ ಭಾರತ ತತ್ತರಗೊಂಡಿದೆ.

ಹವಾಮಾನ ವೈಪರೀತ್ಯದಿಂದಾಗಿ ಉತ್ತರ ಪ್ರದೇಶದಲ್ಲಿ ಮಕ್ಕಳು ಸೇರಿ ಅನೇಕ ಮಂದಿ ಬಲಿಯಾಗಿದ್ದು, ಆಂಧ್ರ ಪ್ರದೇಶದಲ್ಲಿ , ಪಶ್ಚಿಮ ಬಂಗಾಳ ಮತ್ತು ದೆಹಲಿಯೂ ಸೇರಿ ಅದೆಷ್ಟೋ ಜನರು ಮೃತಪಟ್ಟಿದ್ದಾರೆ ಎಂದು ವರದಿಗಳು ಬಂದಿವೆ. ಸಾವಿನ ಸಂಖ್ಯೆ ಇನ್ನೂ ಏರಿಕೆಯಾಗುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ ಎಂದು ಆಯಾ ರಾಜ್ಯಗಳು ತಿಳಿಸಿವೆ. ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಉತ್ತರ ಭಾರತದ ರಾಜ್ಯಗಳಲ್ಲಿ ಮಳೆ ಹಾಗೂ ಬಿರುಗಾಳಿ ಎದ್ದಿದ್ದು, ಒಟ್ಟು ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಗಾಯಗೊಂಡವರ ಪಟ್ಟಿಯಲ್ಲೂ ಉತ್ತರ ಪ್ರದೇಶದವರೇ ಹೆಚ್ಚಿದ್ದು, 53 ಮಂದಿ ಗಾಯಗೊಂಡರೆ, ದೆಹಲಿಯಲ್ಲಿ 11 ಮಂದಿ ಹಾಗೂ ಪಶ್ಚಿಮ ಬಂಗಾಳದಲ್ಲಿ ಒಬ್ಬರು ಗಾಯಗೊಂಡಿದ್ದಾರೆ.

ಭಾನುವಾರ ಸಂಜೆಯಿಂದಲೇ ನಿರಂತರವಾಗಿ ಸುರಿದ ಮಳೆ ಹಾಗೂ ಬಿರುಗಾಳಿಯಿಂದಾಗಿ ದೆಹಲಿ, ಉತ್ತರ ಪ್ರದೇಶದ ಜನಜೀವನ ಅಸ್ತವ್ಯಸ್ತಗೊಂಡಿದ್ದು, ರಸ್ತೆ, ರೈಲು ಸಂಚಾರಕ್ಕೆ ಅಡಚಣೆಯಾಗಿದೆ. ಇದೇ ಸಂದರ್ಭದಲ್ಲಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗೆ ನಷ್ಟವುಂಟಾಗಿದೆ. ಮೆಟ್ರೋ ಮತ್ತು ವಿಮಾನ ಸಂಚಾರದಲ್ಲೂ ವ್ಯತ್ಯಯ ಉಂಟಾಗಿತ್ತು.

ಇನ್ನೆರಡು ದಿನ ಇದೇ ಪರಿಸ್ಥಿತಿ: ಹವಾಮಾನ ಇಲಾಖೆ ವರದಿ ಪ್ರಕಾರ ಮಳೆ ಹಾಗೂ ಬಿರುಗಾಳಿಯಿಂದ ತತ್ತರಿಸಿರುವ ರಾಜ್ಯಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎಂದು ಮಾಹಿತಿ ನೀಡಿದೆ. ಮುಂದಿನ ಎರಡು ದಿನಗಳ ಕಾಲ ಈ ಪ್ರದೇಶಗಳಲ್ಲಿ ಮಳೆ ಹಾಗೂ ಬಿರುಗಾಳಿ ಅಬ್ಬರ ಮುಂದುವರಿಯಲಿದೆ. ‘ಪಶ್ಚಿಮ ಭಾಗದಿಂದ ಬೀಸುತ್ತಿರುವ ಬಿರುಗಾಳಿ ಹಾಗೂ ಮಳೆ ವಾಯುವ್ಯ ಭಾಗಕ್ಕೆ ತಿರುಗಲಿದ್ದು ,ಮುಂದಿನ ಎರಡು ದಿನಗಳ ಕಾಲ ಇದೇ ಪರಿಸ್ಥಿತಿ ಮುಂದುವರೆಯಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ ವಿಜ್ಞಾನಿ ಚರಣ್ ಸಿಂಗ್ ತಿಳಿಸಿದ್ದಾರೆ. ಉತ್ತರ ಭಾರತದ ಉ.ಪ್ರ, ಅಸ್ಸಾಂ, ಮೇಘಾಲಯ, ಮಿಜೊರಾಂ, ತ್ರಿಪುರಾ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ವ್ಯಾಪಕ ಮಳೆಯಾಗುವ ಲಕ್ಷಣಗಳಿವೆ. ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸ್‌ಗಢ, ತಮಿಳುನಾಡಿನಲ್ಲೂ ಮಳೆಯಾಗುವ ಸಾಧ್ಯತೆಗಳಿವೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., # 483/1A/2A/3 Shri Ram plaza, 3rd floor, opp to Jain college, behind kotak Mahindra bank, club Road , hubli. Printed at M/s Manipal Media Network Ltd., Block No.660-661, Adargunchi Village, Chabhi (H), Budrasinghi Cross, Opp. TCI Godown, P.B. Road, Hubballi-580059.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:60, Issue:349